ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾದ ಪ್ರೌಢಶಾಲೆಗಳ ಸಂಖ್ಯೆ

981 (143): ಬಿ.ಎಂ. ಇದಿನಬ್ಬ (ಉಳ್ಳಾಲ):-

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ಬಳಿಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭ ಮಾಡಿದ ಸರ್ಕಾರಿ ಮತ್ತು ಖಾಸಗಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮತ್ತು ವರ್ಷವಾರು ವಿವರ ನೀಡುವುದು);

ಆ) 1991-92ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಸಂಖ್ಯೆ ಎಷ್ಟು;

ಇ) ಆ ಪೈಕಿ ಸರ್ಕಾರ ಎಷ್ಟಕ್ಕೆ ಅನುಮತಿ ನೀಡಿದೆ (ತಾಲ್ಲೂಕುವಾರು ವಿವರ ನೀಡುವುದು);

ಈ) ಸರ್ಕಾರದ ಅನುಮತಿ ಇಲ್ಲದೆ ಖಾಸಗಿ ಅಥವಾ ಸರ್ಕಾರಿ ಪ್ರೌಢಶಾಲೆಗಳಿಗೆ ಜಿಲ್ಲಾಪರಿಷತ್ ಅನುಮತಿ ನೀಡಿದೆಯೇ;

ಉ) ಹಾಗಿದ್ದಲ್ಲಿ ಅವು ಎಲ್ಲೆಲ್ಲಿ, ಮತ್ತು ಯಾವುವು ?

ಡಾ: ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ಸರ್ಕಾರಿ ಪ್ರೌಢಶಾಲೆಗಳು -- 22
ಖಾಸಗಿ ಪ್ರೌಢಶಾಲೆಗಳು - 23
(ತಾಲ್ಲೂಕುವಾರು ಮತ್ತು ವರ್ಷವಾರು ವಿವರವನ್ನು ಅನುಬಂಧ - 'ಅ'ನಲ್ಲಿ ನೀಡಲಾಗಿದೆ.

ಆ) ಸರ್ಕಾರಿ - ಇಲ್ಲ
ಖಾಸಗಿ - 11

ಇ) ಸರ್ಕಾರಿ - ಇಲ್ಲ
ಖಾಸಗಿ - 9 (ತಾಲ್ಲೂಕುವಾರು ನಂತರ ಒದಗಿಸಲಾಗುವುದು)

ಈ) ಜಿಲ್ಲಾಪರಿಷತ್‌ನಿಂದ ತೆರೆದ ಕೆಲವು ಸರ್ಕಾರಿ ಪ್ರೌಢಶಾಲೆಗಳಿಗೆ ಸರ್ಕಾರ ಘಟನೋತ್ತರ ಅನುಮತಿ ನೀಡಿದೆ.
ಸರ್ಕಾರದ ಅನುಮತಿ ಇಲ್ಲದೆ ಜಿಲ್ಲಾಪರಿಷತ್ ಒಟ್ಟು 11 ಖಾಸಗಿ ಪ್ರೌಢಶಾಲೆಗಳಿಗೆ ಅನುಮತಿ ನೀಡಿದೆ.

ಉ) ಪಟ್ಟಿ ಲಗತ್ತಿಸಿದೆ. (ಅನುಬಂಧ - ಅ)

ಅನುಬಂಧ – ಅ

ಸರ್ಕಾರಿ ಪ್ರೌಢಶಾಲೆಗಳು			ಖಾಸಗಿ ಪ್ರೌಢಶಾಲೆಗಳು		
ವರ್ಷ	ತಾಲ್ಲೂಕು	ಸಂಖ್ಯೆ	ವರ್ಷ	ತಾಲ್ಲೂಕು	ಸಂಖ್ಯೆ
1987–88	ಇಲ್ಲ	–	1987–88	ಉಡುಪಿ ತಾ:	01
88–89	ಮಂಗಳೂರು ತಾ:	01	88–89	ಬಂಟ್ವಾಳ ತಾ:.	02
	ಬಂಟ್ವಾಳ ತಾ:	02	88–89	ಉಡುಪಿ ತಾ:	01
	ಬೆಳ್ತಂಗಡಿ ತಾ:	01		ಬೆಳ್ತಂಗಡಿ ತಾ:	01
	ಕಾರ್ಕಳ ತಾ:	01		ಪುತ್ತೂರು ತಾ:	01
	ಉಡುಪಿ ತಾ:	01	1989-90	ಮಂಗಳೂರು ತಾ:	04
	ಕುಂದಾಪುರ ತಾ:	01		ಕಾರ್ಕಳ ತಾ:	01
	ಸುಳ್ಯ ತಾಲ್ಲೂಕು	01	1990-91	ಇಲ್ಲ	–
	ಪುತ್ತೂರು	01	1991-92	ಮಂಗಳೂರು	03
		09		ಸುಳ್ಯ	01
1989–90	ಬೆಳ್ತಂಗಡಿ ತಾ:	03		ಉಡುಪಿ	01
	ಕಾರ್ಕಳ ತಾ:	02		ಬೆಳ್ತಂಗಡಿ	01
	ಸುಳ್ಯ ತಾ:	02		ಕುಂದಾಪುರ	01
	ಕುಂದಾಪುರ ತಾ:	01	1992-93	ಪುತ್ತೂರು	03
				ಪುತ್ತೂರು	01
		08		ಕಾರ್ಕಳ	01
1990–91	ಕಾರ್ಕಳ ತಾ:	01		ಒಟ್ಟು	23
91–92	ಇಲ್ಲ	–			
92–93	ಪುತ್ತೂರು ತಾ:	01			
	ಕಾರ್ಕಳ ತಾ:	01			
	ಉಡುಪಿ ತಾ:	01			
	ಮಂಗಳೂರು ತಾ:	01			
		05			
	ಜಿಲ್ಲಾಪರಿಷತ್ ಸರ್ಕಾರದಿಂದ ಅನುಮತಿ	–17 – 05			
	ಒಟ್ಟು	22			

ಅನುಬಂಧ – ಆ

ಸರ್ಕಾರದ ಅನುಮತಿ ಇಲ್ಲದೆ ಜಿಲ್ಲಾಪರಿಷತ್ ಅನುಮತಿ ನೀಡಿದ ಖಾಸಗಿ ಪ್ರೌಢಶಾಲೆಗಳು

	ತಾಲ್ಲೂಕು	ಮಾಧ್ಯಮ	ವರ್ಷ
1.	ಡಾ. ಟಿ.ಎಂ.ಎ.ಪೈ. ಪ್ರೌಢಶಾಲೆ, ಕಲ್ಯಾಣಪುರ ಉಡುಪಿ ತಾಲ್ಲೂಕು	ಕನ್ನಡ	1987–88
2.	ತುಂಬೆ ಪ್ರೌಢಶಾಲೆ, ತುಂಬೆ, ಬಂಟ್ವಾಳ ತಾಲ್ಲೂಕು	– ಅದೇ –	1988–89
3.	ಶ್ರೀ ನಾರಾಯಣಗುರು ಪ್ರೌಢಶಾಲೆ, ಪಳುಬೆಳ್ಳೆ, ಉಡುಪಿ ತಾಲ್ಲೂಕು	– ಅದೇ –	1988–89
4.	ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರೌಢಶಾಲೆ, ಬೆಳಾಲು, ಬೆಳ್ತಂಗಡಿ ತಾ:	– ಅದೇ –	1988–89
5.	ಸಂತ ಜಾರ್ಜ್ ಪ್ರೌಢಶಾಲೆ, ಕೊಯ್ಯೂರು ಪದವಿ ಪುತ್ತೂರು ತಾ:	– ಅದೇ –	1988–89
6.	ಶ್ರೀ ಪಂಚದುರ್ಗ ಪರಮೇಶ್ವರ ಪ್ರೌಢಶಾಲೆ ಕಕ್ಕೇಬೀಳು, ಬಂಟ್ವಾಳ ತಾ:	– ಅದೇ –	1988–89
7.	ಶ್ರೀ ನಾರಾಯಣಗುರು ಬಾಲಕಿಯರ ಪ್ರೌಢಶಾಲೆ, ಕಾಟಪಳ್ಳ	– ಅದೇ –	1989–90
8.	ಸಂತ ಜೋಸೆಫ್ ಪ್ರೌಢಶಾಲೆ, ಬಜಾಲು, ಮಂಗಳೂರು	– ಅದೇ –	1989–90
9.	ಟಿಪ್ಪು ಸುಲ್ತಾನ್ ಪ್ರೌಢಶಾಲೆ, ಕೋಟೆಪುರ, ಉಳ್ಳಾಲ ಮಂಗಳೂರು	– ಅದೇ –	1989–90
10.	ಮಂಗಳಜ್ಯೋತಿ ಸಮಗ್ರ ಶಾಲೆ, ವಾಮಂಜೂರು, ಮಂಗಳೂರು	– ಅದೇ –	1989–90
11.	ಸೋಮನಾಥೇಶ್ವರ ಪ್ರೌಢಶಾಲೆ, ಪುತ್ತಿಗೆ, ಕಾರ್ಕಳ ತಾ:	– ಅದೇ –	1989–90

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆ

982 (675): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):–

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿರುವ ಶಿಕ್ಷಕರ ಕೊರತೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಜಿಲ್ಲೆಯಲ್ಲಿ 10ರಿಂದ 15 ವರ್ಷಗಳಷ್ಟು ಕಾಲ ಒಂದೇ ಕಡೆ ಸೇವೆಯನ್ನು ಮಾಡುವ ಶಿಕ್ಷಕರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು);